ಆಮೇಲೆ ವಿಪರೀತ ಹೆದರಿಕೆಯಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಮನಸ್ಸು ಪ್ರೇರೇಪಿಸತೊಡಗಿತ್ತು. ಅಷ್ಟರಲ್ಲಿ ಬಾಗಿಲ ಕಡೆ ಸದ್ದಾಯಿತು. ನೋಡಿದರೆ ಅವಳು. ಓಡಿಬಂದು ಅವಳನ್ನು ತಬ್ಬಿಕೊಂಡಿದ್ದ. ಈಗಲೂ ಹಾಗೆ ಬಂದೇ ಬರುವಳೆನ್ನುವ ವಿಶ್ವಾಸ ಅವನಿಗೆ. ಅರ್ಧ ತಾಸಾದಾರೂ ಯಾವುದೇ ಸದ್ದಿಲ್ಲ. ಒಂದೊಂದು ಕ್ಷಣವೂ ಎಷ್ಟೊಂದು ಭೀಕರ ಎನಿಸುವುದು. ಬಿಕೊ ಎನ್ನುವ ರಾತ್ರಿ. ಕಾಕಾನನ್ನು ಕರೆಯಲು ಹೋದ ಗದಿಗೆಪ್ಪನೂ ನಾಪತ್ತೆ. ಶಿವಣ್ಣನೂ ಊರಲ್ಲಿಲ್ಲ. ಅವನು ಇದ್ದಿದ್ದರೆ ಬಂದೇಬರುತ್ತಿದ್ದ. ಅವನ ಮಾತನ್ನು ಮಾಯಿ ಖಂಡಿತ ತೆಗೆದುಹಾಕುತ್ತಿರಲಿಲ್ಲ. ಆದರೆ ಅವನನ್ನು ತಾನು ಕೇಳುವುದೆ? ತಮ್ಮ ಜಗಳ ಬಗೆಹರಿಸೆಂದು ಅವನಿಗೆ ತಾನು ಅಂಗಲಾಚುವುದೆ?

ತನ್ನ ಮನೆಯಲ್ಲಿ ಆತ ಹಿಂದೆ ಕೆಲಸಕ್ಕಿದ್ದ. ಈಗ ನೋಡಿದರೆ ಅವನೂ ದೊಡ್ಡ ಮಾಲೀಕನ ತರಹ ಆಡುತ್ತಾನೆ. ಮೊದಮೊದಲು ಹೊಂಗಲಕ್ಕೆ ಹೋಗಿ ಹಾಲಿನ ಕ್ಯಾನ್ ಇಟ್ಟುಬರುವುದಕ್ಕೆ ಆತನಿಗೆ ಅಷ್ಟೊಇಷ್ಟೊ ಕೊಟ್ಟರೆ ನಡೆಯುತ್ತಿತ್ತು. ಆದರೆ ಈಗ ಅವನಿಗೆ ಒಂದು ಕ್ಯಾನಿಗೆ ಇಷ್ಟು ಎಂದು ತಿಂಗಳಿಗೆ ಲೆಕ್ಕ ಮಾಡಿ ದುಡ್ಡು ಕೊಡಬೇಕು. ಒಂದು ರೀತಿಯಲ್ಲಿ ಆತ ಪಾಲುದಾರನಾಗಿದ್ದಾನೆ. ಮೊದಮೊದಲು ಆತ ಹೊಟೇಲಿನ ವೇಟರ್ ಆಗಿದ್ದ. ಆ ಕೆಲಸ ಆತ ಎಂದಾದರೂ ಮಾಡಿದ್ದನೆ ಎಂದು ಈಗ ಊಹಿಸಿಕೊಳ್ಳುವುದು ಕೂಡ ಕಷ್ಟ. ಅದಕ್ಕೆಲ್ಲ ಕಾರಣ ದುಂಡಪ್ಪಕಾಕಾನೆ ಕಾರಣ. ಅವನ ಜಮೀನು ನೋಡಿಕೊಳ್ಳುವ ಬಾಬಾಜಾನ್ ಹುಬ್ಬಳ್ಳಿಯ ತಮ್ಮ ಬೀಗರ ಹತ್ತಿರ ವಲಸೆ ಹೋಗಿದ್ದರಿಂದ ಶಿವಣ್ಣ ಆ ಕೆಲಸ ಮಾಡಲೆಂದು ಕಾಕಾ ಹಚ್ಚಿದ. ಶಿವಣ್ಣನಿಗೆ ಹೊಲದ ಕೆಲಸ ಚೂರೂ ಇಷ್ಟವಿರಲಿಲ್ಲ. ತಮ್ಮ ಜಮೀನನ್ನೆ ಆತ ಸರಿಯಾಗಿ ಮಾಡಿದವನಲ್ಲ. ತಮ್ಮ ಜಮೀನಿನ ಬೆಳೆಯನ್ನು ಅಣ್ಣತಮ್ಮಂದಿರ ಕಣ್ಣು ತಪ್ಪಿಸಿ ಕಳ್ಳತನದಿಂದ ತನ್ನಲ್ಲಿ ಮಾರಿದವನು. ಅವನಿಗೆ ಅದೆಲ್ಲ ಈಗ ನೆನಪೇ ಇಲ್ಲ. ತಾನು ದುಂಡಪ್ಪಕಾಕಾನ ವಾರಸುದಾರ ಎನ್ನುವಂತೆ ಮೆರೆಯುತ್ತಾನೆ. ಆದರೆ ದುಂಡಪ್ಪಕಾಕಾನ ದಾಯಾದಿಗಳು ಸುಮ್ಮನೆ ಬಿಟ್ಟಾರೆಯೆ? ಅವರೂ ಸರಿಯಾದ ಸಮಯ ಬರಲೆಂದು ಕಾಯುತ್ತಿದ್ದಾರೆ. ದುಂಡಪ್ಪನದು ಅತಿಯಾಗಿದೆಯೆಂದು ಅವರಿಗೂ ಗೊತ್ತು. ಊರಿನ ಪ್ರಮುಖರಲ್ಲಿ ಅವನೂ ಒಬ್ಬನೆಂದು ಸುಮ್ಮನೆ ಇದ್ದಾರೆ.

ಎಲ್ಲವನ್ನೂ ನಿರ್ಧರಿಸಲೇಬೇಕು ಎಂದು ಗಟ್ಟಿ ನಿಂತರೆ ಶಿವಣ್ಣ ಬೀದಿಪಾಲಾಗುವುದು ಒಂದು ದಿನದ ಮಾತು! ಆ ದಿನಕ್ಕಾಗಿ ತಾನು ಕಾಯುತ್ತಿದ್ದೇನೆ. ಆಗ ಮಾಯಿ ಸ್ವಾಭಾವಿಕವಾಗಿ ಅವನಿಂದ ದೂರವಾಗುತ್ತಾಳೆ. ಅಲ್ಲಿಯತನಕ ತಾನೂ ಸುಮ್ಮನಿರುವುದನ್ನು ಕಲಿಯಬೇಕು. ಶಿವಣ್ಣನಿಂದ ಉಪಾಯದಿಂದ ಕೆಲಸ ತೆಗೆದುಕೊಂಡು ಹೊರಗೆಹಾಕಬೇಕು. ಮಾಯಿಯನ್ನೂ ಹಾಗೆಯೇ ಮಾಡುವುದು, ಓಹ್! ಕೈಯಲ್ಲಿ ಏನೂ ಇಲ್ಲದೆ ಕನ್ನಡಿಯೊಳಗಿನ ಗಂಟಿಗಾಗಿ ತಾನು ಕೈಚಾಚುತ್ತಿದ್ದೇನೆ! ಮೊದಲು ಮಾಯಿ ತಿರುಗಿ ಬರಲಿ. ಅವಳ ಕಾಲಿಗೆ ಬಿದ್ದಾದರೂ ತಾನು ಇದನ್ನು ಸರಿಪಡಿಸಿಕೊಳ್ಳಬೇಕು. ಉಳಿದಿದ್ದನ್ನು ಮುಂದೆ ನೋಡೋಣ. ಪ್ರತಿಯೊಂದಕ್ಕೂ ಸಮಯ ಬರುತ್ತದೆ ಎನ್ನುತ್ತಾರಲ್ಲ. ಸಾಧ್ಯವಾದರೆ ಒಂದು ದಿನ ಹೋಗಿ ಆ ಸಮಯ ಎಲ್ಲಿ, ಯಾವಾಗ ಬರುವುದು ಎಂದು ಗಿರಿಯಪ್ಪನಲ್ಲಿ ಶಾಸ್ತ್ರ ಕೇಳಿಬರುವುದು, ಮಾಯಿ ದೊಡ್ಡ ಮಾಯೆಯಾಗಿ ಕಾಡುತಿದ್ದಾಳೆಂದು ಈತ ಬಾಗಿಲ ದಾಟಿ ರಸ್ತೆಯುದ್ದಕ್ಕೂ ನಡೆದುಹೋದ. ಆಕೆಯ ಸುಳಿವಿಲ್ಲ. ಎಲ್ಲಿಯಾದರೂ ನಿಂತಿದ್ದಾಗಲಿ, ತಿರುಗಿ ಬರುತ್ತಿದ್ದಾಗಲಿ ಕಾಣಿಸಲಿಲ್ಲ. ಇಷ್ಟು ಹೆದರಿಕೆ ಅವನಿಗೆ ಜೀವನದಲ್ಲಿಯೇ ಆಗಿರಲಿಲ್ಲ. ದಾರಿಯಲ್ಲಿ ಯಾರೂ ಇಲ್ಲ.

ಯಾರೋ ಅಪರಿಚಿತನೆಂದು ನಾಯಿಗಳು ಅವನ ಬೆನ್ನು ಹತ್ತಿ ದೊಡ್ಡದಾಗಿ ಒದರುತ್ತ ಬಂದವು. ಕೊನೆಗೆ ಇವನ ಗುರುತು ಹಿಡಿದು ಮುಖ ಕೆಳಗೆ ಮಾಡಿಕೊಂಡು ತಿರುಗಿ ಹೋದವು. ಅವನಿಗೆ ನಡೆದು ಸಾಕಾಯಿತು. ನಡೆಯಲು ಶಕ್ತಿ ಸಾಲದಂತಾಗಿ ಒಂದು ಕಡೆ ಕುಸಿದು ಕುಳಿತ. ಏನೊಂದು ಅರಿವಿಲ್ಲದಂತೆ ಬಹಳ ಹೊತ್ತು ಹಾಗೆಯೇ ಕುಳಿತಿದ್ದ. ಕುಳಿತಿದ್ದನೋ? ಇಲ್ಲವೆ ಕುಳಿತಲ್ಲಿಯೆ ನಿದ್ದೆಗೆ ಜಾರಿದ್ದನೋ? ಅವನನ್ನು ಯಾರೋ ಮುಟ್ಟಿದಂತಾಯಿತು. ಯಾವುದರಿಂದಲೋ ತಲೆ ಸವರಿದಂತಾಯಿತು. ಮೈಯ ಕೂದಲು ನೆಟ್ಟಗಾಗಿ ಆತ ಎಚ್ಚರಗೊಂಡ. ಓಹ್, ಮಾಯಿ ಬಂದಳೆಂದು ಕಾಣುತ್ತದೆ! ಆತ ತುಂಬ ಖುಷಿಯಿಂದ ಕಣ್ತೆರೆದ. ಎರಡು ದನಗಳು ಅವನ ಹತ್ತಿರವೆ ನಿಂತಿವೆ. ಆಕಳೊಂದು ಅವನ ತಲೆಯನ್ನು ನಾಲಿಗೆಯಿಂದ ಸವರುತ್ತಿದೆ. ಇವು ತನ್ನನ್ನು ತುಳಿದು ದಾಟಿಹೋಗಿದ್ದರೆ ತನ್ನ ಪಾಡು ಏನಾಗಿರುತ್ತಿತ್ತೆಂದು ಕಳವಳಪಟ್ಟ. ತುಳಿದರೆ ಏನು ಮಾಡುವುದೆಂದು ಹೆದರುತ್ತಿದ್ದೇನೆ! ಛೆ! ಜೀವಕ್ಕೆ ಇಷ್ಟು ಹೆದರುವ ತಾನು ಆತ್ಮಹತ್ಯೆ ಮಾಡಿಕೊಳ್ಳಬಲ್ಲನೆ?

'ಹಗ್ಯಾ, ಏಯ್ ಹಗ್ಯಾ..' ಸುತ್ತಲಿನ ದನಗಳನ್ನು ಆಚೆ ಕಳಿಸುತ್ತ ಅಲ್ಲಿಂದ ಎದ್ದ. ಅಷ್ಟಾದರೂ ಅವು ತುಸು ಸರಿದಂತೆ ಮಾಡಿ ಮತ್ತೆ ಅವನ ಹತ್ತಿರ ಬರತೊಡಗಿದವು. ಎಲ್ಲಿ ತನಗೆ ಕೊಂಬು ಚುಚ್ಚುವವೋ, ಎಲ್ಲಿ ಕಾಲಿನಿಂದ ಒದೆಯುವವೋ ಎಂದು ಹೆದರಿ ಅವನ್ನು ಎರಡು ಕೈಯಿಂದ ದೂಡತೊಡಗಿದ. ಅಷ್ಟೊತ್ತಿಗೆ ಕತ್ತಲದಲ್ಲಿ ಯಾರೊ ನಡೆದು ಬರುತ್ತಿರುವುದು ಕಾಣಿಸಿತು. ಇಬ್ಬರಿದ್ದಾರೆ. ಹತ್ತಿರ ಬಂದೊಡನೆ ತಿಳಿಯಿತು. ಗದಿಗೆಪ್ಪ ಮತ್ತು ದುಂಡಪ್ಪಕಾಕಾ. ದೇವಣ್ಣನಿಗೆ ತುಸು ಉಸಿರು ಬಂದಿತು. ಆದರೆ ಅವರೊಂದಿಗೆ ಮಾಯಿ ಇಲ್ಲದ್ದನ್ನು ಕಂಡು ಅವನೊಳಗಿನ ಭಯ, ಭೀತಿ ಇನ್ನೂ ಹೆಚ್ಚಾಯಿತು. ಗದಿಗೆಪ್ಪನೆ ದನಗಳನ್ನು ಅತ್ತ ದೂಡಿದ. ಎದೆಗುಂದಿದ್ದ ದೇವಣ್ಣ ಕಾಕಾನನ್ನು ಕಂಡೊಡನೆ ತಬ್ಬಿಕೊಂಡು ಗಳಗಳ ಅಳತೊಡಗಿದ.

'ಕಾಕಾ, ಮಾಯಿ ಮನಿ ಬಿಟ್ಟು ಹೋಗ್ಯಾಳ. ನನಗ ಬಾಳ ಅಂಜಿಕಿ ಆಗೇತಿ... ನನಗ ಇದೆಲ್ಲ ಸಾಕಾಗೇತಿ' ಆ ರಾತ್ರಿಯಲ್ಲಿಯೂ ದೇವಣ್ಣನ ಮುಖದಲ್ಲಿದ್ದ ಘೋರ ಭೀತಿಯನ್ನು ಗುರುತಿಸಬಹುದಾಗಿದ್ದಿತು. ಇದೆಲ್ಲ ಹೇಗಾಯಿತು, ತಮ್ಮ ನಡುವೆ ಕಲಹವೇಕೆ ಉಂಟಾಗುತ್ತಿದೆಯೆಂದು ತಿಳಿಯದೆ ಆತ ಕಂಗಾಲಾಗಿದ್ದ. "ದೇವಣ್ಣ, ಎಲ್ಲಾ ಗೊತ್ತಾಗೇತಿ. ಯಾಕ ಹೆದರ್ತಿ? ಅಂಜಬ್ಯಾಡ. ನಿಮ್ಮ ಅಪ್ಪಅವ್ವನ ಪುಣ್ಯಾ ಅನ್ನಬೇಕು. ಮಾಯಕ್ಕ ಆರಾಮ ಅದಾಳು. ಹೆದರಬ್ಯಾಡ. ಆಕೀ ಸೀದಾ ನಮ್ಮ ಮನಿಗೆ ಬಂದ್ಲು. ಆಕಿ ಹಿಂದಿನಿಂದ ನಿಮ್ಮ ಗದಿಗೆಪ್ಪ ಬಂದ. ಆಕಿ ಒಂದು ರೀತಿ ಸೋತಿದ್ಲು. ನಿಂದರಲಿಕ್ಕೆ ಆಗ್ತಿರಲಿಲ್ಲ. ಮಾಯಕ್ಕಗ ಒಂದು ಗುಳಿಗೆ ಕೊಟ್ಟು ಮಲಗಿಸಿದೇವಿ. ಸ್ವಲ್ಪ ವಿಶ್ರಾಂತಿ ತಗೊಳ್ಳಲಿ. ಆಕಿ ಕಾಳಜಿ ಮಾಡಲಿಕ್ಕೆ ಬಾಜೂ ಮನಿ ಸಾವಂತ್ರೆವ್ವಗ ಹೇಳಿ ಬಂದೇವಿ. ನಡೀ, ನಾವು ಎಲ್ಲಾರೂ ಇವತ್ತು ನಿನ್ನ ಚಾದಂಗಡಿಯೊಳಗೆ ಮಲಕೊಂಡ್ರಾತು.'

ಕಾಕಾನ ಮಾತು ಕೇಳುತ್ತಲೇ ದೇವಣ್ಣನಿಗೆ ಹೋದ ಪ್ರಾಣ ಬಂದಂತಾಯಿತು. ನಡುರಸ್ತೆಯಲ್ಲಿಯೆ ಅವನ ಕಾಲಿಗೆ ಬೀಳಹೋದ. 'ಕಾಕಾ, ಮೊದಲಿಂದನೂ ನೀವು ನನ್ನ ಕಾಯ್ದೀರಿ.' ದೇವಣ್ಣನನ್ನು ಎಬ್ಬಿಸುತ್ತ ಕಾಕಾ ಹೇಳಿದ.

'ಕಾಯಾಕ ನಾನು ಎಷ್ಟರವನೊ? ಇಲ್ಲೆ ಹತ್ತಿರ ದ್ಯಾಮವ್ವ ಅದಾಳಲ್ಲ. ಅವಳೇ ಎಲ್ಲರನ್ನೂ ಕಾಯಾಕಿ'. ಗುಡಿಯ ದಿಕ್ಕಿನ ಕಡೆ ಕೈಮುಗಿದರು.

(ಸಶೇಷ)

## ಕಳೆದ ಸಂಚಿಕೆಯಲ್ಲಿ

ಮಾಯಕ್ಕ–ದೇವಣ್ಣರ ಮದುವೆ ಪ್ರಸ್ತಾಪ ಮತ್ತೆ ಬರುತ್ತದೆ. 'ಒಂಟಿ ಹೆಂಗಸು ಅಂದ್ರೆ ಪುಕ್ಕಟೆ ಬಿದ್ದಿರತಾರು ಅಂತ ಬಾಳಷ್ಟು ಗಂಡಸರು ತಿಳ್ಕೊಂಡಿರತಾರು. ನೀ ಹಂಗೇನಾದ್ರೂ ತಿಳಕೊಂಡಿದ್ರ ಮೊದಲೆ ಹೇಳು. ಆ ತರಹ ಭಾವನೆ ನಿನ್ನ ಮನಸ್ಸಿನೊಳಗ ಇದ್ರ ಮೊಟ್ಟಮೊದಲು ಅದನ್ನ ತೆಗೆದುಹಾಕು' ಎಂಬ ಕರಾರು ಹಾಕಿಯೇ ಮಾಯಕ್ಕ ದೇವಣ್ಣನೊಂದಿಗೆ ಮದುವೆಗೆ ಒಪ್ಪುತ್ತಾಳೆ. ಆದರೆ ಹಿಂದೆ ಅನಸೂಯೆಯೂ ಇಂಥದೇ ಮಾತನ್ನು ಹೇಳಿದ್ದಳು ಎಂಬುದನ್ನು ದೇವಣ್ಣ ಸ್ಮರಿಸಿಕೊಳ್ಳುತ್ತಾನೆ. ಒಮ್ಮೊಮ್ಮೆ ಅನಸೂಯೆ ಬಾಯಿಯಿಂದ ಕೆಟ್ಟ ಬೈಗುಳಗಳನ್ನು ಕೇಳಿದ ನೆನಪು ದೇವಣ್ಣನನ್ನು ಕಾಡಲಾರಂಭಿಸುತ್ತದೆ.

